**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 649/2019</u>**

ದಿನಾಂಕಃ **14.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಗೋವಿಂದಸ್ವಾಮಿ | ಚಾಸಾ-4, ಪ್ರಾಸ.-4 |
| ತಂದೆಯ ಹೆಸರುಃ | ನರಸಪ್ಪ | |
| ವಯಸ್ಸು ಃ | 48 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಜೋಡಿತಿಮ್ಮಾಪುರ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-5 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತಿಲ್ಲ. ಬೀರೂರು ಪೋಲಿಸರು ಸುಮಾರು 7 ವರ್ಷಗಳ ಹಿಂದೆ ಕಳ್ಳತನದ ವಿಚಾರವಾಗಿ ಬೈಕನ್ನು ಅಮಾನತ್ತುಪಡಿಸಲು ಮಹಜರ್ ಗೆ ಸಹಕರಿಸುವಂತೆ ನನ್ನನ್ನು ಕೋರಿ ಬೀರೂರು ಠಾಣೆಗೆ ನನ್ನನ್ನು ಮತ್ತು ಚಾಸಾ-5 ರವರನ್ನು ಕರೆದಿರುತ್ತಾರೆ. ಪೋಲಿಸರು ಮಹಜರ್ ಕ್ರಮ ಜರುಗಿಸಿ ಆರೋಪಿಗಳಿಂದ ಡಿಸ್ಕವರಿ ಬೈಕನ್ನು ಮಧ್ಯಾಹ್ನ 12.00 ರಿಂದ 1.00 ಗಂಟೆ ಸಮಯದಲ್ಲಿ ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ದಿಃ 15.12.2017 ರ ಅಮಾನತ್ತು ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-8 ರ ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ನಿಪಿ-9 ರಲ್ಲಿ ನಾನು, ಚಾಸಾ-5, ಪೋಲಿಸರು ಮತ್ತು ನ್ಯಾಯಾಲಯದ ಮುಂದಿರುವ 3 ಮತ್ತು 4 ನೇ ಆರೋಪಿತರು ಇರುವುದಾಗಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ04.12.2017 ರಂದು ಚಾಸಾ-1 ರವರ ತೋಟದ ಮನೆಯಿಂದ ಕೊಬ್ಬರಿ ಕಳ್ಳತನ ಮಾಡಲು ಬೈಕನ್ನು ಉಪಯೋಗಿಸಿದ್ದು ಸದರಿ ಬೈಕನ್ನು ವಶಪಡಿಸಿಕೊಳ್ಳುವ ಸಲುವಾಗಿ ಅಮಾನತ್ತು ಮಹಜರ್ ಗೆ ಸಹಕರಿಸುವಂತೆ ಕೋರಿ ನನಗೆ ಮತ್ತು ಚಾಸಾ-5 ರವರಿಗೆ ಪೋಲಿಸರು ಕೋರಿಕೊಂಡಿದ್ದರು ಎಂದರೆ ಸರಿ. ದಿಃ 15.12.2017 ರಂದು ನಾನು ಮತ್ತು ಚಾಸಾ-5 ರವರು ಠಾಣೆಗೆ ಹೋಗಿದ್ದು 3 ರಿಂದ 5 ನೇ ಆರೋಪಿತರು ಠಾಣೆಯಲ್ಲಿ ಹಾಜರಿದ್ದು ಅವರು ತೋರಿಸಿದ ಬೈಕ್ ಸಂಖ್ಯೆ ಕೆಎ-18 ಇಎ-6058 ನ್ನು ಮಧ್ಯಾಹ್ನ 12.30 ರಿಂದ 1.00 ಗಂಟೆವರೆಗೆ ನಿಪಿ-8 ರ ಮಹಜರ್ ನಂತೆ ಅಮಾನತ್ತು ಕ್ರಮ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ ನಿಪಿ-9 ರಂತೆ ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿ.

ಚಾಸಾ-1 ರವರ ತೋಟದ ಮನೆಯ ಶೆಡ್ ನಿಂದ ಕೊಬ್ಬರಿ ಕಳ್ಳತನವಾದ ವಿಚಾರವಾಗಿ ಚಾಸಾ-1 ರವರು ಬೀರೂರು ಪೋಲಿಸರಿಗೆ ದೂರು ನೀಡಿದ್ದು, ಆ ದೂರಿಗೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳ ಚಾಸಾ-1 ರವರ ಜಮೀನಿನಲ್ಲಿ ಕೃತ್ಯ ನಡೆದ ಸ್ಥಳದ ಮಹಜರ್ ಜರುಗಿಸಲು ನನಗೆ ಮತ್ತು ಚಾಸಾ-2 ರವರಿಗೆ ಪೋಲಿಸರು ಮಹಜರ್ ಗೆ ಸಹಕರಿಸುವಂತೆ ಕೋರಿದ್ದರು ಎಂದರೆ ಸಾಕ್ಷಿ ಚಾಸಾ-1 ರವರ ಕೋರಿಕೆಯಂತೆ ನಾವು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸಂಜೆ 4.00 ರಿಂದ 5.00 ಗಂಟೆವರೆಗೆ ನಿಪಿ-2 ರಂತೆ ದಿಃ 05.12.2017 ರಂದು ಮಹಜರ್ ಕ್ರಮ ಜರುಗಿಸಿ ನಿಪಿ-3 ರಂತೆ ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.